Literacy for a Billion

Movie: Sneha Loke
Year: 1999

Song: Yaarige Yaaroo Ilree
Lyricist: Hamsalekha

ಯಾರಿಗೆ ಯಾರೂ ಇಲ್ರೀ ರೀ ರೀ
ಬಂಧುಗಳಿಲ್ಲ ಸುಳ್ರೀ ರೀ ರೀ
ಅಂತಸ್ತೇ ಮುಖ್ಯಾರೀ
ವರ್ಚಸ್ಸೇ ಲೆಖ್ಖಾರೀ
ಪ್ರೀತ್ಸಿದ್ದೇ ತಪ್ಪಂದ್ರೆ
ನಾವಿನೇನ್ ಹೇಳೋದ್ರೀ
ಎತ್ತಿಗೆ ಜ್ವರ ಬಂದ್ರೇರೀ
ಎಮ್ಮೆಗೆ ಬರೆ ಹಾಕ್ತಾರ್ರೀ
ಯಾರಿಗೆ ಯಾರೂ ಇಲ್ರೀ ರೀ ರೀ
ಬಂಧುಗಳಿಲ್ಲ ಸುಳ್ರೀ ರೀ ರೀ

ಅಪ್ಪ ಹಾಕಿದ ಮರ
ಅಂತ ಹಗ್ಗ ಕಟ್ಟಿ
ನೇಣ್ ಹಾಕ್ಕೋತಾರಲ್ರೀ
ಹಳೇ ನೀರು ಹೋಗಿ
ಹೊಸ ನೀರು ಬಂದ್ರೆ
ಬೇಡ ಅನಬಾರ್ದ್ರೀ
ರೀ ರೀ ರಿರಿರೀ
ರೀ ರೀ ರಿರಿರೀ
ಬಣ್ಣ ಜಾತಿ ಅಂತ ದೇವ್ರೇ ಸಾವ್ರ
ತಪ್ಪು ಮಾಡಿ ಕುಂತಿದಾನಲ್ರೀ
ಪ್ರೀತಿ ಮಾಡಿ ಅವ ತಪ್ಪನೆಲ್ಲ
ಸರಿ ಮಾಡೋದ್ ಒಳ್ಳೇದ್ ಕಣ್ರೀ
ಮೂರು ಘಳಿಗೆ ಬಾಳಿನೊಳಗೆ
ಪ್ರೀತಿ ಮಾಡ್ರೀ ಒಂದು ಘಳಿಗೆ

ಮನಸನು ಕಲ್ಲು ಮಾಡಿದಿರಿ
ಮಸೆದು ಮಸೆದು ಬೆಂಕಿ ತಂದಿರಿ
ದ್ವೇಷದ ಬೆಂಕಿಯ ಬೆಳಕಲಿ
ನಮ್ಮನು ಬಾಳಿ ಎಂದಿರಿ
ಬದುಕಿನ ಬಂಧು ಪ್ರೀತಿಯೇ ಎಂದು
ತಿಳಿದುಕೊಳ್ಳದಿರುವ ಜಾಣ ದಡ್ಡಾರೀ ರೀ ರೀ
ಯಾರಿಗೆ ಯಾರೂ ಇಲ್ರೀ ರೀ ರೀ
ಬಂಧುಗಳಿಲ್ಲ ಸುಳ್ರೀ ರೀ ರೀ
ಅಂತಸ್ತೇ ಮುಖ್ಯಾರೀ
ವರ್ಚಸ್ಸೇ ಲೆಖ್ಖಾರೀ
ಪ್ರೀತ್ಸಿದ್ದೇ ತಪ್ಪಂದ್ರೆ
ನಾವಿನೇನ್ ಹೇಳೋದ್ರೀ
ಎತ್ತಿಗೆ ಜ್ವರ ಬಂದ್ರೇರೀ
ಎಮ್ಮೆಗೆ ಬರೆ ಹಾಕ್ತಾರ್ರೀ
ಯಾರಿಗೆ ಯಾರೂ ಇಲ್ರೀ ರೀ ರೀ
ಬಂಧುಗಳಿಲ್ಲ ಸುಳ್ರೀ ರೀ ರೀ

ಕೊಲೆ ಮಾಡಿದರೂ
ಜೈಲು ಹಾರಿದರೂ
ಕ್ಷಮೆ ಕೇಳುತಾರ್ರೀ
ಲಂಚ ನುಂಗಿದರೂ
ದೇಶ ಮಾರಿದರೂ
ಅಪೀಲ್ ಹೋಗುತಾರ್ರೀ
ರೀ ರೀ ರಿರಿರೀ
ರೀ ರೀ ರಿರಿರೀ

ಬಿಡೋದಿಲ್ಲ ಅಂದ ನದೀನೀರುಗಳ
ಬಿಡ್ತಾ ಇದೀವಲ್ರೀ
ಪ್ರೀತಿ ಮಾಡಿದೋರ ಒಮ್ಮೆ ಕ್ಷಮಿಸಲು
ಮುಖ ನೋಡ್ತೀರಲ್ರೀ
ನೀವು ಮಾಡ್ದ್ರೆ ಮದುವೆಯಂತೆ
ನಾವೇ ಆದ್ರೇ ಪ್ರೀತಿಯಂತೆ
ಭರತನ ತಾಯಿ ಶಕುಂತಲ
ಮದುವೆ ಆಗಿಯೇ ಹೆತ್ತಳಾ
ಯಾರೇ ನೀನು ಅಂದರೂ
ರುಜುವಾತ್ ಮಾಡದೆ ಬಿಟ್ಟಳಾ
ಬದುಕಿಗೆ ಎಂದು ಪ್ರೀತಿಯೇ ಬಂಧು

ತಿಳಿದುಕೊಳ್ಳದಿರುವ ಜಾಣ ದಡ್ಡಾರೀ ರೀ ರೀ
ಯಾರಿಗೆ ಯಾರೂ ಇಲ್ರೀ ರೀ ರೀ
ಬಂಧುಗಳೆಲ್ಲ ಸುಳ್ರೀ ರೀ ರೀ
ಅಂತಸ್ತೇ ಮುಖ್ಯಾರೀ
ವರ್ಚಸ್ಸೇ ಲೆಖ್ಖಾರೀ
ಪ್ರೀತ್ಸಿದ್ದೇ ತಪ್ಪಂದ್ರೆ
ನಾವಿನೇನ್ ಹೇಳೋದ್ರೀ
ಎತ್ತಿಗೆ ಜ್ವರ ಬಂದ್ರೇರೀ
ಎಮ್ಮೆಗೆ ಬರೆ ಹಾಕ್ತಾರ್ರೀ
ಯಾರಿಗೆ ಯಾರೂ ಇಲ್ರೀ ರೀ ರೀ
ಬಂಧುಗಳೆಲ್ಲ ಸುಳ್ರೀ ರೀ ರೀ

Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.